ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆ ಕುರಿತು

02 (174) : ಶ್ರೀ ಕೃಷ್ಣಪಾಲೆ ಮಾರ್ ಜೆ (ಸುರತ್ ಕಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪಶ್ಚಿಮ ಘಟ್ಟಗಳ ಪ್ರದೇಶಗಳ ಎಷ್ಟು ಗಣಿಗಾರಿಕೆಗಳಿಗೆ ಅನುಮತಿ ನೀಡಲಾಗಿದೆ; ಹಾಗೂ ಅವುಗಳಿರದ ಬರತಕ್ಕ ರಾಜಸ್ವದ ಮೊತ್ತ ಎಷ್ಟು;

ಆ) ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಗಣಿಗಾರಿಕೆ ಹೆಚ್ಚುತ್ತಿರುವುದರಿಂದ ಪ್ರಾಕೃತಿಕ ಅಸಮತೋಲನವುಂಟಾಗುವುದಿಲ್ಲವೇ;

ಇ) ಈ ಕುರಿತು ಸರ್ಕಾರದ ನಿಲುವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪಶ್ಚಿಮಘಟ್ಟ ಪ್ರದೇಶದಲ್ಲಿ ಮೆ॥ ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಇವರಿಗೆ ಗಣಿಗಾರಿಕೆ ನಡೆಸಲು ಸರ್ಕಾರ ಅನುಮತಿ ನೀಡಿದೆ. ಈ ಸಂಸ್ಥೆಯಿಂದ ವಾರ್ಷಿಕ ಸರಾಸರಿ ರೂ. 1,52,95,935/– ಗಳಷ್ಟು ರಾಜಧನ ವಸೂಲಿಯಾಗುತ್ತಿದೆ.

ಆ) ಇಲ್ಲ. ಪಶ್ಚಿಮಘಟ್ಟ ಪ್ರದೇಶದಲ್ಲಿ ಮೇಲೆ ಹೇಳಿರುವ ಸಂಸ್ಥೆಗೆ ಬಿಟ್ಟು ಬೇರೆ ಯಾರಿಗೂ ಗಣಿ ಗುತ್ತಿಗೆಗೆ ಅನುಮತಿ ನೀಡಲಾಗುತ್ತಿಲ್ಲ.

ಇ) ಸರ್ಕಾರವು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಯಾರಿಗೂ ಹೊಸದಾಗಿ ಗಣಿಗಾರಿಕೆ ನಡೆಸಲು ಅನುಮತಿ ನೀಡದಿರಲು ನಿರ್ಧರಿಸಿದೆ. ಹಾಲಿ ಜಾಲ್ತಿಯಲ್ಲಿರುವ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಇವರಿಗೆ ಶ್ರೇಷ್ಠ ನ್ಯಾಯಾಲಯದ ಆದೇಶದಂತೆ ಗಣಿಗಾರಿಕೆ ಅನುವು ಮಾಡಿಕೊಡಲಾಗಿದೆ.

ಎಸ್.ಸಿ/ಎಸ್.ಟಿ. ಅಭಿವೃದ್ಧಿ ನಿಗಮದ ಯೋಜನೆಗಳ ಕುರಿತು

04 (212) : ಶ್ರೀ ರೇವು ನಾಯಕ್ ಬೆಳೆಮಗಿ (ಕಮಲಪೂರ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಹಮ್ಮಿಕೊಂಡಿರುವ ಯೋಜನೆಗಳಾವುವು?

ಆ) ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯ ಪ್ರಯೋಜನ ಲಭಿಸಿದೆ.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಈ ಯೋಜನೆಗಳ ಪೈಕಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. (ಕಮಲಾಪುರ ಮತ ಕ್ಷೇತ್ರದ ಪೂರ್ಣ ವಿವರ ಒದಗಿಸುವುದು)

ಈ) ಇವುಗಳಲ್ಲಿ ಪೂರ್ಣಗೊಂಡಿರುವ ಹಾಗೂ ಅಪೂರ್ಣವಾದವುಗಳು ಎಷ್ಟು.

ಉ) ವಿಫಲ ಬಾವಿಗಳಿಗೆ ಯಾವ ಪರಿಹಾರ ನೀಡಲಾಗಿದೆ. ಮತ್ತು ಅಪೂರ್ಣಗೊಂಡ ಬಾವಿಗಳ ನಿರ್ಮಾಣಕ್ಕೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಧರಮ್ ಸಿಂಗ್ (ಮುಖ್ಯ ಮಂತ್ರಿಯವರು)

ಅ) ಸರ್ಕಾರವು ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವನ್ನು ದಿನಾಂಕ: 20–3–2975 ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ಥಾಪಿಸಿರುತ್ತದೆ. 2003–04ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.

1. ಸ್ವಯಂ ಉದ್ಯೋಗ ಯೋಜನೆ
2. ಭೂ ಒಡೆತನ ಯೋಜನೆ
3. ಗಂಗಾ ಕಲ್ಯಾಣ ಯೋಜನೆ
4. ದೇವದಾಸಿ ಪುನರ್ ವಸತಿ ಯೋಜನೆ
5. ಸಫಾಯಿ ಕರ್ಮಚಾರಿ ಪುನರ್ ವಸತಿ ಯೋಜನೆ

ಆ) ನಿಗಮದ ಪ್ರಾರಂಭದಿಂದ 31-3-2004 ರವರೆಗೆ ವಿವಿಧ ಯೋಜನೆಗಳಡಿ 5,64,236 ಪರಿಶಿಷ್ಟ ಜಾತಿ ಮತ್ತು 62,509 ಪರಿಶಿಷ್ಟ ವರ್ಗ ಒಟ್ಟು 6,26,745 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿದೆ.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ 1824 ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಈ ಪೈಕಿ ಕಮಲಾಪುರ ಮತಕ್ಷೇತ್ರದಲ್ಲಿ 50 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಈ) 1305 ಕೊಳವೆಬಾವಿಗಳು ಪೂರ್ಣಗೊಂಡಿದ್ದು, ಇವುಗಳಲ್ಲಿ 519 ಕೊಳವೆಬಾವಿಗಳು ವಿದ್ಯುದ್ದೀಕರಣಗೊಳ್ಳಲು ಬಾಕಿ ಇವೆ.

ಉ) ನೀರಿಲ್ಲದಿದ್ದರೆ ಹಣವಿಲ್ಲವೆಂಬ ನಿಬಂಧನೆ ಮೇರೆಗೆ ನಿಗಮವು ಕೊಳವೆಬಾವಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ ಕೊಳವೆಬಾವಿಗಳಲ್ಲಿ ನೀರು ದೊರೆಯದೆ ಇರುವಂತಹ ವಿಫಲ ಕೊಳವೆಬಾವಿಗಳಿಗೆ ಕೊಳವೆಬಾವಿ ಕೊರೆಯುವ ಗುತ್ತಿಗೆದಾರರಿಗೆ ಹಣ ಪಾವತಿಸಿರುವುದಿಲ್ಲ. ಫಲಾನುಭವಿಗಳಿಗೆ ಯಾವುದೇ ರೀತಿಯ ಹಣ ಪಾವತಿಸದೆ ಇರುವುದರಿಂದ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮ ಪಂಚಾಯಿತಿ ಅಧಿಕಾರ ವಿಕೇಂದ್ರೀಕರಣದಿಂದಾದ ಭ್ರಷ್ಟಾಚಾರ ಕುರಿತು

06 (229) : ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿ ಆಡಳಿತದಲ್ಲಿ ವಿಕೇಂದ್ರೀಕರಣದ ನೆಪ ಬಡ್ಡಿ ನೀಡಿರುವ ಹೆಚ್ಚಿನ ಅಧಿಕಾರಿಗಳ ಪರಿಣಾಮ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕೆ ಸಂಬಂಧಪಟ್ಟಂತೆ ವಾಚ್ ಡಾಗ್ ಕಮಿಟಿಯನ್ನು ರಚನೆ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದರೆ, ಇದನ್ನು ಯಾವಾಗ ರಚಿಸಲಾಗುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಇಲ್ಲಾ.

ಆ) ಇದೆ.

ಇ) ಮಾನ್ಯ ಲೋಕಾಯುಕ್ತರ ನೇತೃತ್ವದಲ್ಲಿ ಪ್ರತಿ ಜಿಲ್ಲೆಯಲ್ಲೂ ಓಂಬಡ್ಸಮನ್ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ.

ರಾಜ್ಯದಲ್ಲಿರುವ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಯೋಜನೆ

07 (190) : ಶ್ರೀಮತಿ ಸುನಿತಾ ವೀರಪ್ಪಗೌಡ. ಜೆ. (ಬನ್ನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?